# ನಾಗರೀಕ ಸೌಕರ್ಯ ನಿವೇಶನಗಳ ಅರ್ಜಿ ಸಲ್ಲಿಸಲು ಅರ್ಹತೆಗಳು

1. ಅರ್ಜಿಗಳನ್ನು ಸಲ್ಲಿಸುವುದಕ್ಕಿಂತಲೂ ಮುಂಚೆ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿ ನೋಂದಣಿ ಶುಲ್ಕ ಪಾವತಿಸಿ ಪ್ರಾರಂಭಿಕ ಠೇವಣಿಯೊಂದಿಗೆ ನಿಗಧಿತ ಪ್ರಪತ್ರ –11 ರಲ್ಲಿ ಅರ್ಜಿ ಸಲ್ಲಿಸಬೇಕು.

2. ಈ ಹಿಂದೆ ನಾಗರೀಕ ಸೌಕರ್ಯ ನಿವೇಶನ ಕೋರಿ ನೋಂದಾಯಿಸಿ ಅರ್ಜಿಗಳನ್ನು ಹಾಕಿಕೊಂಡಿದ್ದವರು ಈ ಪ್ರಕಟಣೆಯನ್ವಯ ಹೊಸದಾಗಿ ನೋಂದಣಿ ಮಾಡಿಸಿ ಹೊಸದಾಗಿ ಅರ್ಜಿ ಹಾಕಿಕೊಳ್ಳತಕ್ಕದ್ದು. ಈ ಹಿಂದೆ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

3. ಯಾವುದೇ ಸಂಸ್ಥೆಯು ಒಂದಕ್ಕಿಂತ ಹೆಚ್ಚು ಸಿಎ ನಿವೇಶನಗಳಿಗೆ ಅರ್ಜಿ ಸಲ್ಲಿಸಲು ಅಪೇಕ್ಷಿಸಿದಲ್ಲಿ ಅ ಸಂಸ್ಥೆಯು ಪ್ರತಿಯೊಂದು ನಿವೇಶನಕ್ಕು ಪ್ರತ್ಯೇಕವಾಗಿ ನೊಂದಾಯಿಸಿ ಹಾಗೂ ಪ್ರತ್ಯೇಕವಾಗಿ ಪ್ರಾರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಬೇಕು.

4. ನಿಯಮಗಳಿಗೆ ಒಳಪಟ್ಟು ನೊಂದಾಯಿಸಿಕೊಂಡ ಸಂಸ್ಥೆಯೊಂದಕ್ಕೆ ಸಿಎ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಮಾತ್ರ ಪ್ರಾಧಿಕಾರದಿಂದ ಹಂಚಲಾಗುವುದು.

5. ಸಂಸ್ಥೆ ಎಂದರೆ 1960 ರ ಕರ್ನಾಟಕ ಸಂಘ ಸಂಸ್ಥೆಗಳ ನೊಂದಣಿ ಕಾಯ್ದೆಯಡಿಯಲ್ಲಿ ನೊಂದಾಯಿಸಿಕೊಂಡಿರುವ ಸಂಸ್ಥೆ, ಸಂಘ ಅಥವಾ ಒಂದು ಸಂಘ ಸಂಸ್ಥೆ ಅಥವಾ 1959 ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಮೇರೆಗೆ ನೊಂದಾಯಿತವಾದ ಸಹಕಾರಿ ಸಂಘ ಅಥವಾ ಯಾವುದೇ ಧರ್ಮದಾಯಿಕ, ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಪೂರ್ಣವಾಗಿ ಸೃಜಿಸಲಾದ ಒಂದು ನ್ಯಾಸ.

6. ಅರ್ಜಿದಾರನು ವಾರ್ಷಿಕ ವರದಿ ಮತ್ತು ಕಳೆದ ಮೂರು ವರ್ಷಗಳ ಲೆಕ್ಕ ಪರಿಶೋಧನೆಯಾದ ವರದಿ, ನಿವೇಶನ ಹಂಚಿಕೆ ಬೇಡಿಕೆ ಬಗ್ಗೆ ನಿರ್ಣಯಗಳು ಇತ್ಯಾದಿಗಳನ್ನು ಅರ್ಜಿಯ ಜೊತೆ ಸಲ್ಲಿಸಬೇಕು.

7. ಸಿಎ ನಿವೇಶನಕ್ಕಾಗಿ ಅರ್ಜಿ ಸಲ್ಲಿಸುವ ಸಂಸ್ಥೆಯು ತಾನು ಪಡೆಯುವ ನಿವೇಶನ ಯಾವ ಉದ್ದೇಶದ ಕಟ್ಟಡ ನಿರ್ಮಾಣಕ್ಕೆ ಆರ್ಥಿಕ ಸಂಪನ್ಮೂಲ /ಈಗಿನ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಬ್ಯಾಂಕ್ ವ್ಯವಹಾರದ ದೃಢೀಕೃತ ಪ್ರತಿ ಲಗತ್ತಿಸುವುದು.

8. ಸದರಿ ಸಂಸ್ಥೆಯು ಸಾಮಾಜಿಕ ಕ್ಷೇತ್ರದಲ್ಲಿ ಹಮ್ಮಿಕೊಂಡ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡುವುದು.

9. ನೊಂದಣಿಯಾಗಿ ಕನಿಷ್ಠ ಮೂರು ವರ್ಷ ಪೂರೈಸಿರುವ ಸಂಸ್ಥೆಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

10. ಸಂಸ್ಥೆಯು ಕೇವಲ ನೊಂದಣಿಗೆ ಸೀಮಿತವಾಗಿರದೆ ಇದುವರೆಗೆ ಕೈಗೊಂಡಿರುವ ಸಾಮಾಜಿಕ ಚಟುವಟಿಕೆಗಳನ್ನು ಪರಿಗಣಿಸಲಾಗುವುದು.

11. ನಿವೇಶನದ ಹಂಚಿಕೆಯಿಂದ ಆ ಭಾಗದ ನಾಗರೀಕರಿಗೆ ಆಗಬಹುದಾದ ಅನುಕೂಲತೆಗಳನ್ನು ಹಾಗೂ ಸಂಸ್ಥೆಗೆ ನಿವೇಶನ ಅವಶ್ಯಕತೆಯ ಬಗ್ಗೆ ವಿಶ್ಲೇಶಿಸಿ ಪರಿಗಣಿಸಲಾಗುವುದು.

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು